ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಕುಬಿನಿ 2ನೇ ಹಂತ ಯೋಜನೆ ಇರುವುದಿಲ್ಲ.

ಆ) ಮೇಲೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮೇಲೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆಳಂದ ಪಟ್ಟಣದಲ್ಲಿ ಕಟ್ಟರುವ ಉಪ ಕಾರಾಗೃಹ ಕಟ್ಟಡ

784 - ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಆಳಂದ ಪಟ್ಟಣದಲ್ಲಿರುವ ಉಪ ಕಾರಾಗೃಹವನ್ನು ಕಟ್ಟಿಸಿ 15 ವರ್ಷಗಳು ಕಳೆದರೂ ಇಲಾಖೆಯವರು ಸದರಿ ಕಟ್ಟಡವನ್ನು ವಶಕ್ಕೆ ತೆಗೆದುಕೊಂಡಿಲ್ಲದಿರಲು ಕಾರಣವೇನು?*

2. *ಸದರಿ ಕಟ್ಟಡವನ್ನು ಇಲಾಖೆಯವರು ವಶಕ್ಕೆ ತೆಗೆದುಕೊಳ್ಳದೇ ಇರುವುದರಿಂದ ಕಟ್ಟಡವು ಶಿಥಿಲಗೊಂಡು ಹಾಳಾಗುತ್ತಿರುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ?*

3. *ಸದರಿ ಕಟ್ಟಡವನ್ನು ಎಷ್ಟು ದಿನಗಳಲ್ಲಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗುವುದು?*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1. ಆಳಂದ ಉಪ ಕಾರಾಗೃಹದ ನಿರ್ಮಾಣವು 1989ರಲ್ಲಿ ಪ್ರಾರಂಭವಾಗಿದ್ದು ಪುರುಷರ ಬ್ಯಾರಕ್‌ಗಳು ಸ್ನಾನಘಟ್ಟ ಮುಂತಾದ ಕೆಲವು ಕಾಮಗಾರಿಗಳು ಮುಕ್ತಾಯವಾಗಿರುತ್ತವೆ. ಈವರೆಗೆ ಈ ಕೆಲಸಕ್ಕೆ ರೂ. 21.71 ಲಕ್ಷ ವೆಚ್ಚವಾಗಿರುತ್ತದೆ. ಈ ಕಾರಾಗೃಹಕ್ಕೆ ಅತ್ಯಾವಶ್ಯಕವಾದ ಈ ಕೆಳಗಿನ ಕೆಲಸಗಳನ್ನು ಇನ್ನೂ ಮಾಡಬೇಕಾಗಿದೆ.

1. ಬಂಧಿಗಳ ಕಟ್ಟಡಗಳಲ್ಲಿ ನೀರಿನ ತೊಟ್ಟಿ ನಿರ್ಮಿಸಿರುವುದಿಲ್ಲ.
2. ಪ್ರತಿ ಸೆಲ್‌ಗಳಲ್ಲಿ ಶೌಚಾಲಯ ಮತ್ತು ನೀರಿನ ತೊಟ್ಟಿ ನಿರ್ಮಿಸುವುದಿಲ್ಲ.
3. ಸ್ನಾನದ ತೊಟ್ಟಿ ಮತ್ತು ಬಟ್ಟೆ ತೊಳೆಯುವ ವ್ಯವಸ್ಥೆ ಇರುವುದಿಲ್ಲ.
4. ನೀರು ಸರಬರಾಜು ಮತ್ತು ಒಳಚರಂಡಿಗಳ ವ್ಯವಸ್ಥೆ ಇರುವುದಿಲ್ಲ.
5. ಮುಖ್ಯದ್ವಾರದ ಬಾಗಿಲಿಗೆ ಬೀಗದ ವ್ಯವಸ್ಥೆ ಇರುವುದಿಲ್ಲ.
6. ಶೌಚಾಲಯದ ಛಾವಣಿಗೆ ಗ್ರಿಲ್ ಹಾಕಿರುವುದಿಲ್ಲ.

7. ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ.

8. ವಸತಿ ಗೃಹಗಳ ಎಲ್ಲೆಗಳನ್ನು ಗುರುತಿಸಿ ತಂತಿಬೇಲಿಯ ಕಾಂಪೌಂಡ್ ಹಾಕಿರುವುದಿಲ್ಲ.

ಈ ಮಧ್ಯೆ ಕಾರಾಗೃಹಗಳ ಮಹಾ ನಿರೀಕ್ಷಕರು ಈ ಕಾರಾಗೃಹದ ಕಟ್ಟಡಕ್ಕೆ ಭೇಟಿ ನೀಡಿದ್ದು ಈ ಕೆಳಗಿನ ನ್ಯೂನತೆಗಳನ್ನು ನೋಡಿರುತ್ತಾರೆ.

1. ಬ್ಯಾರಕ್‌ಗಳ ಮೇಲ್ಛಾವಣಿಯು ಸೋರಿ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

2. ಬ್ಯಾರಕ್‌ಗಳು ಹಾಗೂ ಸೆಲ್‌ಗಳಲ್ಲಿ ನೀರು ಶೇಖರಿಸಲು ನಿರ್ಮಿಸಿದ ಸಣ್ಣ ತೊಟ್ಟಿಗಳು ಬಿರುಕು ಬಿಟ್ಟಿರುತ್ತವೆ.

3. ಶೌಚಾಲಯಕ್ಕೆ ನಿರ್ಮಿಸಿದ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

4. ಆಗ್ನೇಯ ಭಾಗದ ಸೆಲ್‌ಗಳ ಮುಂದೆ ಕಾರಿಡಾರಿನ ನೆಲವು ಕುಸಿದಿರುತ್ತದೆ.

5. ಆಗ್ನೇಯ ಮೂಲೆಯಲ್ಲಿನ ಸ್ನಾನಘಟ್ಟ ಮತ್ತು ಶೌಚಾಲಯದ ಗೋಡೆಗಳು ಬಿರುಕು ಬಿಟ್ಟಿರುತ್ತವೆ.

ಕಾರಾಗೃಹದ ನಿರ್ಮಾಣದಲ್ಲಿ ಕಂಡುಬಂದ ಲೋಪ ದೋಷಗಳ ಬಗ್ಗೆ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರಿಗೆ ಪತ್ರ ಬರೆದಿದ್ದೂ ಇವುಗಳನ್ನು ಸರಿಪಡಿಸುವಂತೆ ಕೋರಲಾಗಿದೆ. ಕಾರಾಗೃಹ ಸಂಪೂರ್ಣವಾಗಿ ನಿರ್ಮಾಣಗೊಳ್ಳದೇ ಇರುವುದರಿಂದ ಹಾಗೂ ಕಟ್ಟಡದ ನಿರ್ಮಾಣದಲ್ಲಿ ಲೋಪದೋಷಗಳು ಇದ್ದು ಅವು ಬಂಧಿಗಳ ಜೀವಕ್ಕೆ ಅಪಾಯಕಾರಿಯಾಗಿರುವುದರಿಂದ ಈ ಕಾರಾಗೃಹವನ್ನು ಇಲಾಖೆಯು ವಾಸಕ್ಕೆ ತೆಗೆದುಕೊಂಡಿರುವುದಿಲ್ಲ.

2. ಕಾರಾಗೃಹ ಇಲಾಖೆಯು ಕಟ್ಟಡವನ್ನು ವಶಕ್ಕೆ ತೆಗೆದುಕೊಳ್ಳದೇ ಇರುವುದರಿಂದ ಕಟ್ಟಡ ಶಿಥಿಲಗೊಂಡಿರುತ್ತದೆ ಎಂಬುದು ಸರಿಯಲ್ಲ. ಕಟ್ಟಡದ ನಿರ್ಮಾಣವೇ ಕಳಪೆಯಾಗಿರುತ್ತದೆ.

3. ಎಲ್ಲ ಕಾಮಗಾರಿಗಳನ್ನು ಪೂರೈಸಿದ ನಂತರ ಹಾಗೂ ನಿರ್ಮಾಣದಲ್ಲಿ ಕಂಡುಬಂದಿರುವ ಲೋಪದೋಷಗಳನ್ನು ಸರಿಪಡಿಸಿದ ನಂತರ ಕಟ್ಟಡವನ್ನು ಇಲಾಖೆಯು ತನ್ನ ವಶಕ್ಕೆ ತೆಗೆದುಕೊಂಡು ಉಪ ಕಾರಾಗೃಹವನ್ನು ಅದರಲ್ಲಿ ನಡೆಸುತ್ತದೆ.

ಧಾರವಾಡ ಜಿಲ್ಲೆಯಲ್ಲಿರುವ ಕೆರೆಗಳು

785 - ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವ ಕೆರೆಗಳು ಎಷ್ಟು? ಮತ್ತು ಅವುಗಳು ಯಾವುವು?